

# ಮೀನ್ಗುಮ್ಮ

**ಅರ್ಧ ಮೀಟರ್‌ಗಿಂತಲೂ ಎತ್ತರ, ಅಗಲ ಮುಖದಲ್ಲಿ ಹೊಳೆವ ಹಳದಿ ಬಣ್ಣದ ದುಂಡನೆಯ ದೊಡ್ಡ ಕಣ್ಣುಗಳು, ಬಾಗಿದ ಬಲವಾದ ಕೊಕ್ಕು, ತಲೆಯ ಇಕ್ಕೆಡೆಯಲ್ಲಿ ಎದ್ದು ಕಾಣುವ ಕೊಂಬಿನಂತಹ ಕಿವಿಗಳು ಈ ಗುಮ್ಮನ ಲಕ್ಷಣ.**

ಚಿತ್ರ ಬರಹ:
**ಶೈಲಜಾ ಚಂದ್ರಶೇಖರ**

ಸಂಜೆಗತ್ತಲು ಕವಿಯುತ್ತಾ ಇತ್ತು. ಕಾಲು ಹಾದಿಯ ಇಕ್ಕೆಲದಲ್ಲಿ ಬೆಳೆದ ಮರ ಗಿಡಗಳು ಕಪ್ಪಗೆ ಕಾಣುತ್ತಿದ್ದವು. ಮಾಗಿಯ ಕುಳಿರು, ಮಳೆ ಹನಿಯ ತುಂತುರು ಮೈಯನ್ನು ನೇವರಿಸುತ್ತಿದ್ದಂತೆಯೇ ವಾಕಿಂಗ್ ಮುಗಿಸಿ ಮನೆ ಕಡೆ ಸಾಗುತ್ತಿದ್ದ ನಮ್ಮ ಹೆಜ್ಜೆಗಳು ಚುರುಕಾದವು. ಇದ್ದಕ್ಕಿದ್ದಂತೆ ಕೇಳಿ ಬಂದ 'ಹೂ..ಮ್, ಹೂ..ಮ್' ಎಂಬ ಕೂಗು ಕೇಳಿ ಒಮ್ಮೆ ಬೆಚ್ಚಿ ಬಿದ್ದೆ. ಮತ್ತೆ ಕೇಳಿ ಬಂದ 'ಹೂ..ಮ್, ಹೂ..ಮ್' ಅನ್ನು ಗಮನಕ್ಕೆ ತಂದುಕೊಳ್ಳದವಳಂತೆ ಸಾವರಿಸಿಕೊಳ್ಳುತ್ತ ಇವರನ್ನು ಕೇಳಿದೆ– ಗೂಬೆಯಲ್ವೆ?.

'ಹೌದು, ದೊಡ್ಡ ಜಾತಿ ಗೂಬೆಗಳಲ್ಲಿ ಒಂದು. ಇದನ್ನು ಮೀನ್ಗುಮ್ಮ ಅಂತೀವಿ. ಸಂಗಾತಿಯ ಜೊತೆಗಾಗಿ ಕೂಗ್ತಾ ಇದೆ' ಎಂದು ಇವರು ಹೇಳಿದರು. ವಿಷಾದ ತುಂಬಿದ, ಎದೆಯಾಳದಿಂದ ಉಗ್ಗಡಿಸಿಕೊಂಡು ಬಂದಂತೆ ತೋರುವ ಆ ಕೂಗು ಪ್ರಣಯದ ಹಾಡಾಗಿದ್ದರೂ, ಕೇಳುವವರಿಗೆ ಭಯ ಹುಟ್ಟಿಸುವುದಂತೂ ನಿಜ. ಗೂಬೆ ಅಪಶಕುನದ ಸಂಕೇತವಾಗಿರುವುದು ಅದರ ನಿಶಾಚರ ಜೀವನದಿಂದಲೂ ಮತ್ತು ನಿಗೂಢತೆ ತುಂಬಿದ ಕೂಗಿನಿಂದಲೂ ಇರಬಹುದು. ನನಗಂತೂ ಆ ಕ್ಷಣದಲ್ಲಿ 'ಗುಮ್ಮನ ಕರೆಯದಿರೆ' ಹಾಡು ನೆನಪಾಯ್ತು!

ಸ್ವಲ್ಪ ದಿನಗಳ ನಂತರ ಗೆಳತಿಯೊಬ್ಬರು ಮುಸ್ಸಂಜೆಯ ಹೊತ್ತಿಗೆ ಮನೆಗೆ ಬಂದರು. 'ಇವತ್ತು ನಿಮ್ಮ ಮನೆಗೆ ಬರದಿದ್ರೆ ಆ ಗೂಬೆ ನೋಡೋದು ತಪ್ಪುತ್ತಿತ್ತು' ಎಂದು ತಾವು ಕಂಡ ಗೂಬೆಯನ್ನು ವರ್ಣಿಸಿದರು. 'ಎಷ್ಟು ದೊಡ್ಡದು ಅಂತೀರಿ? ಸುಮಾರು ಒಂದೂವರೆ ಅಡಿಯಷ್ಟು ಎತ್ತರ, ಅದಕ್ಕೆ ಸರಿಯಾದ ದಪ್ಪ ಅಂದ್ರೆ ಗಾತ್ರ ಇತ್ತು. ಏನನ್ನೋ ಹಿಡಿಯಲು ಅಟ್ಟಿಸಿಕೊಂಡು ಹಾರ್ತಾ ಇತ್ತು. ನನ್ನ ನೋಡಿ ಅದರ ಜೊತೆ ಹಕ್ಕಿಯೊಂದಿಗೆ ಹಾರಿ ಹೋಯ್ತು. ನಾನು ಮಾತ್ರ ಅಷ್ಟು ದೊಡ್ಡ ಹಕ್ಕಿ ನೋಡಿದ ಸಂಭ್ರಮದಲ್ಲಿ ಬಿಟ್ಟ ಬಾಯಿ ಬಿಟ್ಟ ಕಣ್ಣುಗಳೊಂದಿಗೆ ಸ್ವಲ್ಪ ಹೊತ್ತು ಹಾಗೆ ನಿಂತುಬಿಟ್ಟೆ!' ಎಂದರು.

ಅವರಂದದ್ದು ನಿಜ. ಚಿಟ್ಟುಗೂಬೆಯಂತಹ ಪುಟಾಣಿ ಗೂಬೆ ಕಂಡವರಿಗೆ ಈ ಗೂಬೆ (ಮೀನ್ಗುಮ್ಮ, ಮೀನು ಗೂಬೆ; ಬ್ರೌನ್ ಫಿಷ್ ಔಲ್) ಅಥವಾ ಮಲೆನಾಡಿನಲ್ಲಿ ಕರೆಯುವಂತೆ 'ಗುಮ್ಮ' ಬಾರೀ ದೊಡ್ಡದು ಎಂದೆನಿಸದಿರದು. ಅರ್ಧ ಮೀಟರ್‌ಗಿಂತಲೂ ಎತ್ತರ, ಅಗಲವಾದ ಮುಖದಲ್ಲಿ ಹೊಳೆವ ಹಳದಿ ಬಣ್ಣದ ದುಂಡನೆಯ ದೊಡ್ಡ ಕಣ್ಣುಗಳು, ಬಾಗಿದ ಬಲವಾದ ಕೊಕ್ಕು, ತಲೆಯ ಇಕ್ಕೆಡೆಯಲ್ಲಿ ಎದ್ದು ಕಾಣುವ ಕೊಂಬಿನಂತಹ ಕಿವಿಗಳು ಈ ಗುಮ್ಮನ ಲಕ್ಷಣ. ಕಂದು ಬಣ್ಣದ ರೆಕ್ಕೆಗಳು, ಕುತ್ತಿಗೆಯ ಮುಂಭಾಗ ಬಿಳಿ, ಎದೆ ಹಾಗೂ ಹೊಟ್ಟೆ ಭಾಗ ತಿಳಿ ಕಂದು ಬಣ್ಣದ್ದಿದ್ದು, ಉದ್ದುದ್ದನೆಯ ಕಂದು ಗೆರೆಗಳು ಕಾಣುತ್ತವೆ.

ಕಾಲಿನ ಭಾಗ ತುಪ್ಪಳವಿಲ್ಲದೆ ಬೋಳಾಗಿರುವುದರಿಂದ ಮೀನು ಹಿಡಿಯಲು ಹೇಳಿ ಮಾಡಿಸಿದಂತಿದೆ. ಗಂಡು ಮತ್ತು ಹೆಣ್ಣು ಹಕ್ಕಿಗಳಲ್ಲಿ ರೂಪ ವ್ಯತ್ಯಾಸವಿಲ್ಲ. ಹಾವು, ಹೆಗ್ಗಣ, ಪಕ್ಷಿಗಳು ಮುಂತಾದ ಚಿಕ್ಕ ಪ್ರಾಣಿಗಳನ್ನು ಬೇಟೆಯಾಡಿ ತಿನ್ನುವುದಾದರೂ ಪ್ರಧಾನ ಆಹಾರ ಮೀನಾದುದರಿಂದ ನೀರಿರುವ ತಾಣಗಳಲ್ಲಿ ಈ ಮೀನ್ಗುಮ್ಮನನ್ನು ಸುಲಭವಾಗಿ ಕಾಣಲು ಸಾಧ್ಯ.

ಹಗಲು ಕೆರೆ, ಕೊಳ ಮುಂತಾದ ನೀರಿನಾಸರೆಯ ಹತ್ತಿರ ಎತ್ತರದ ಮರಗಳಲ್ಲಿ ಕೂತಿದ್ದು ವಿಶ್ರಮಿಸಿಕೊಂಡು ಬೇಟೆ ಅರಸುತ್ತಾ ಒಂಟಿಯಾಗಿ ಅಥವಾ ಜೊತೆಯಾಗಿ ಸಂಜೆ ಸಮಯದಲ್ಲಿ ಹೊರಡುತ್ತದೆ. ಡಿಸೆಂಬರ್‌ನಿಂದ ಮಾರ್ಚ್‌ವರೆಗೆ ಇದರ ಪ್ರಜನನ ಕಾಲ. ಗಂಡು ಮತ್ತು ಹೆಣ್ಣು ಎರಡೂ ಮರಿಯ ಪೋಷಣೆಯಲ್ಲಿ ಪಾತ್ರ ವಹಿಸುತ್ತವೆ. ನಿಮಗೆಂದಾದರೂ 'ಹೂ...ಮ್' ಎಂಬ ಕರೆ ಕೇಳಿ ಬಂದಲ್ಲಿ ಮೀನ್ಗುಮ್ಮನನ್ನು ಹತ್ತಿರದಲ್ಲೇ ಯಾವುದಾದರೂ ಮರದ ಮೇಲೆ ಅರಸಲು ಮರೆಯದಿರಿ.